54

**ರಾಜ್ಯದಲ್ಲಿ ಆಸ್ತಿ ನೋಂದಣಿ ಇತಿಹಾಸ ತಿಳಿಯಲು, ಕಂದಾಯ ಇಲಾಖೆ ನೀಡುವ ಋಣಭಾರ ಪ್ರಮಾಣ ಪತ್ರ (ಇಸಿ) ತ್ವರಿತವಾಗಿ ಸಿಗದೆ ಇರುವುದರಿಂದ, ಸಾರ್ವಜನಿಕರು ತಮ್ಮ ನೋಂದಣಿ ವ್ಯವಹಾರಗಳನ್ನು ಸಕಾಲದಲ್ಲಿ ಮಾಡಲು ಸಾಧ್ಯವಾಗದೆ ಸಾಕಷ್ಟು ತೊಂದರೆಯಾಗಿದೆ. ಈ ಇಂದೆ ಕೇವಲ ಮೂರು ದಿನಗಳಲ್ಲಿ ಸಿಗುತ್ತಿದ್ದ ಋಣಭಾರ ಪ್ರಮಾಣ ಪತ್ರ (ಇಸಿ) ಈಗ 15 ದಿನಗಳಾದರೂ ಸಿಗುತ್ತಿಲ್ಲ.**

**ಋಣಭಾರ ಪ್ರಮಾಣ ಪತ್ರ (ಇಸಿ) ಸಕಾಲದಲ್ಲಿ ಸಿಗದಿರುವುದರಿಂದ, ಸಾರ್ವಜನಿಕರು ತಮ್ಮ ನೋಂದಣಿ ವ್ಯವಹಾರಗಳನ್ನು ಯಾವುದೇ ವಿಳಂಭವಿಲ್ಲದೇ ಮಾಡಲು ಸಾಧ್ಯವಾಗದಿರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ ಇವರು ನಿಯಮ 72ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಉತ್ತರ:**

Distributed Denial of Service (DDoS) Attack ನಿಂದಾಗಿ ಕಾವೇರಿ-2.0 ತಂತ್ರಾಂಶದ ಸರ್ವರ್‌ನಲ್ಲಿ ಸಮಸ್ಯೆ ಉಂಟಾಗಿ ದಿನಾಂಕ:06-01-2025 ರಿಂದ 05-02-2025ರವರೆಗೆ ಋಣಭಾರ ಪ್ರಮಾಣ ಪತ್ರ ಸೇವೆಯಲ್ಲಿ ವ್ಯತ್ಯಯವಾಗಿರುತ್ತದೆ. Automated Tools or Bots ಗಳನ್ನು ಉಪಯೋಗಿಸಿ Fake Account ಗಳನ್ನು ಸೃಜಿಸಿ ಇವುಗಳಿಂದ ಡೇಟಾಬೇಸ್‌ಗೆ ಎಂಟ್ರಿಗಳನ್ನು ಮಾಡಲಾಗಿರುತ್ತದೆ. 62 ಲಾಗಿನ್ ಐಡಿಗಳು 14 ಐಪಿ ಅಡ್ರೆಸ್‌ಗಳಿಂದ ಈ ರೀತಿಯ Attack ಮಾಡಿರುವ ಬಗ್ಗೆ ಸೆಂಟರ್ ಫಾರ್ ಸ್ಮಾರ್ಟ್ ಗೌರ್ನೆನ್ಸ್ ಸಂಸ್ಥೆಯು ಮಾಹಿತಿ ನೀಡಿದ್ದು, ಈ ಸಂಬಂಧ ಸೈಬರ್ ಕ್ರೈಂ ಪೋಲಿಸ್ ಠಾಣೆಯಲ್ಲಿ ಎಫ್.ಐ.ಆರ್. ದಾಖಲಿಸಲಾಗಿರುತ್ತದೆ. ದಿನಾಂಕ:06-02-2025 ರಿಂದ ಋಣಭಾರ ಪ್ರಮಾಣಪತ್ರಗಳನ್ನು ವಿಳಂಬವಿಲ್ಲದೆ ಸಾರ್ವಜನಿಕರಿಗೆ ನೀಡಲಾಗುತ್ತಿದೆ. ಸದರಿ ಸಮಸ್ಯೆಯನ್ನು ಈಗಾಗಲೇ ಪರಿಹರಿಸಲಾಗಿದ್ದು, CSG ಯು ಕಾಲಕಾಲಕ್ಕೆ ತಂತ್ರಾಂಶವನ್ನು ಉನ್ನತೀಕರಿಸುತ್ತಿದ್ದು, ಪ್ರಸ್ತುತ ಯಾವುದೇ ಸಮಸ್ಯೆಗಳು ಇರುವುದಿಲ್ಲ.

ಕಂಇ/75/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು